ವಿಷಯ : ರಾಣೇ ಬೆನ್ನೂರು ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ರಸ್ತೆಗಳ ದುರಸ್ತಿ.

Q : 83

ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ 92ರ ನವೆಂಬರ್ ತಿಂಗಳಲ್ಲಾದ ಮಳೆಯಿಂದ ಹಾನಿಗೊಳಗಾದ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು (92ರಲ್ಲಿ ತೆಗೆದು ಕೊಂಡ 50 ಕಿ.ಮೀ. ರಸ್ತೆಯನ್ನೊಳಗೊಂಡು) ದುರಸ್ತು ಮಾಡಲು ಅಂದಾಜು ಪಡಿಸಿದ ಹಣ ಎಷ್ಟು ಹಾಗೂ ಯಾವ ಯಾವ ರಸ್ತೆಗಳನ್ನು ದುರಸ್ತಿ ಮಾಡಲಾಗಿದೆ.

ಆ) ರಾಣೆಬೆನ್ನೂರು ತಾಲ್ಲೂಕಿನ ಜಿಲ್ಲಾಪರಿಷತ್ ವಿಭಾಗದಲ್ಲಿ ಬರುವ ರಸ್ತೆಗಳು 92ರ ನವೆಂಬರ್ ತಿಂಗಳ ಮಳೆಯಲ್ಲಿ ಹಾನಿಗೊಳಗಾಗಿದ್ದು ಇವುಗಳ ದುರಸ್ತಿಗಾಗಿ ತಗಲುವ ಅಂದಾಜು ಹಣ ಎಷ್ಟು ಹಾಗೂ ಅದರಲ್ಲಿ ಈಗಾಗಲೇ ಬಿಡುಗಡೆಯಾದ ಹಣವೆಷ್ಟು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 1. 1992ರ ನವೆಂಬರ್ ತಿಂಗಳಿನಲ್ಲಿ ಆದ ಅತಿವೃಷ್ಟಿಯಿಂದ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ರಸ್ತೆ ಮತ್ತು ಸೇತುವೆಗಳಿಗೆ 19.35 ಲಕ್ಷ ರೂ.ಗಳ ಹಾನಿ ಉಂಟಾಗಿದ್ದು ಅಂದಾಜನ್ನು ಜಿಲ್ಲಾಧಿಕಾರಿ, ಧಾರಾವಾಡರವರಿಗೆ ಸಲ್ಲಿಸಿದೆ.
2. ಈ ಕೆಳಕಂಡ ರಸ್ತೆಗಳ ತುರ್ತು ದುರಸ್ತಿ ಮಾಡಿ ಸಂಚಾರಕ್ಕೆ ಅಣಿ ಮಾಡಲಾಗಿದೆ.

1) ಮಾಸೂರ-ಗುತ್ತಲ ರಸ್ತೆ ಕಿ.ಮಿ. 31 ಮತ್ತು 33ರಲ್ಲಿ ಸೇತುವೆ ಪಕ್ಕದ ಏರಿಗೆ ಉಂಟಾದ ಕೊರೆತದ ತುರ್ತು ಮತ್ತು ತಾತ್ಕಾಲಿಕ ದುರಸ್ತಿ.
2) -ಸದರಿ- ಕಿ.ಮಿ. 42ರಲ್ಲಿ ಸೇತುವೆ ದುರಸ್ತಿ.
3) ರಾಣೆಬೆನ್ನೂರ-ಬೆಲೂರ ರಸ್ತೆ ಕಿ.ಮಿ. 10 ರಿಂದ 13ರವರೆಗೆ ದುರಸ್ತಿ.
4) ರಾಣೆಬೆನ್ನೂರ-ಹಿರೇಬೆದರಿ ರಸ್ತೆ ಕಿ.ಮಿ. 15 ರಿಂದ 20ರವರೆಗೆ ದುರಸ್ತಿ.

ಆ) ಜಿಲ್ಲಾಪರಿಷತ್‌ನ ವ್ಯಾಪ್ತಿಯ ಹಾನಿಗೊಳಗಾದ ರಸ್ತೆಗಳ ದುರಸ್ತಿಗಾಗಿ ತಗಲುವ ಅಂದಾಜು ವೆಚ್ಚ 63.80 ಲಕ್ಷ ರೂ. ಅದರಲ್ಲಿ ಈಗಾಗಲೇ 0.80 ಲಕ್ಷ ರೂ. ಬಿಡುಗಡೆ ಆಗಿದೆ.

ವಿಷಯ : ರಾಣೆಬೆನ್ನೂರು ತಾಲ್ಲೂಕು ಮಡ್ಲೇರಿ ಏತ ನೀರಾವರಿ ಯೋಜನೆ.

Q : 84

ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?